# ಅನುಭವಕ್ಕೆ ಅರ್ಥ ಇಲ್ಲ

ಅನುಭವದ ಮುಂದೆ ಯಾವ ಮಾತೂ ನಿಲ್ಲುವುದಿಲ್ಲ. ನಿಲ್ಲಬೇಕಿಲ್ಲ. ಅಂದರೆ ಅನುಭವವನ್ನು ಮಾತಿನಲ್ಲಿ ಹೇಳುವುದು, ಅನುಭವದ ಎಲ್ಲ ಮಗ್ಗುಲುಗಳನ್ನೂ ಮಾತಿನಲ್ಲಿ ಮಂಡಿಸುವುದು ಕಷ್ಟಸಾಧ್ಯ. ಮಾತಿನಲ್ಲಿ ಇಡಿಯಾಗಿ ಹೇಳಲಾಗಲಿಲ್ಲ ಎನ್ನುವ ಕಾರಣದಿಂದ ಅನುಭವಕ್ಕೆ ಯಾವ ಊನವೂ ಇಲ್ಲ. ಆ ಮಾತು ಬೇರೆ! ವಸ್ತು ಲೋಕವನ್ನು ಅದರ ವಿವರಗಳ ಮೂಲಕ ಕಣ್ಣಿಗೆ ಕಟ್ಟುವಂತೆ ಇತರರಿಗೆ ಬಣ್ಣಿಸಬಹುದು. ಯಾರನ್ನು ಉದ್ದೇಶಿಸಿ ನಾವು ಮಾತು ಆಡುವೆವೋ ಆ ಇತರರೂ ವಸ್ತುಲೋಕದ ಭಾಗವೇ ಆಗಿರುವುದರಿಂದ ಇದು ಸ್ವಲ್ಪಮಟ್ಟಿಗೆ ಸುಲಭ- ಅವರ ವಸ್ತುವನ್ನು ಅವರಿಗೇ ಒಪ್ಪಿಸಿದಂತೆ! ಆದರೆ ಎಷ್ಟು ವಿವರಗಳಿದ್ದರೂ- ನಾವು ನೋಡಿದ ನಿಸರ್ಗದ ವಿವರಗಳು ಎಂದಿಟ್ಟುಕೊಳ್ಳಿ- ನಿಸರ್ಗ ದರ್ಶನದ ಅನುಭವವು ಇಡಿಯಾಗಿರುವುದರಿಂದ, ಇಡಿಯಾಗಿರುವುದರಿಂದಲೇ ಅಮೂರ್ತವಾಗಿರುವುದರಿಂದ, ಏಕಾಕಾರವಾಗಿರುವುದರಿಂದ ಇಂಥ ಆತ್ಮನಿಷ್ಠ-ಸಬ್ಜೆಕ್ಟಿವ್-ಅನುಭವಗಳನ್ನು ಸಂವಹನ ಮಾಡುವುದು ಕಷ್ಟ.

ವಿವರಣೆಗಳ ದಟ್ಟಣೆಯಲ್ಲಿ ಕೆಲವೊಮ್ಮೆ ಅನುಭವವೇ ಕಳೆದು ಹೋದಂತಾಗಬಹುದು. ಅಥವಾ ಕೆಲವು ವಿವರಗಳೇ ಮುಖ್ಯವಾಗಿ ಕಂಡು ಅನುಭವವೇ ವ್ಯತ್ಯಸ್ತವಾಗಬಹುದು. ಮರಗಳ ಬಣ್ಣನೆಯಲ್ಲಿ ತೊಡಗುತ್ತ ಕಾಡಿನ ಕಾಣ್ಕೆಯೇ ಕಳೆದು ಹೋಗಬಹುದು! ಅಂದರೆ, ಯಾವುದೇ ಅನುಭವವಾಗುವಾಗ ಆ ಕಣದಲ್ಲಿ ನಮಗೆ ನಾವೇ ಹೇಳಿಕೊಳ್ಳಬೇಕಾದ ಅಗತ್ಯವೂ ಇಲ್ಲದಂತೆ ಪರ್ಯಾಪ್ತವಾಗಿ ಅನುಭವವಾಗುವುದರಿಂದ ಅದನ್ನು ಮಾತಿನಲ್ಲಿ ಮತ್ತೆ ಹಾಗೆಯೇ ಮೂಡಿಸುವುದು ಕಷ್ಟ. ಮೂಡಿಸಿದರೂ ಮೂಡಿಸಲಾಗುವುದಿಲ್ಲ. ಅಂದರೆ- ಇನ್ನೊಂದು ರೀತಿಯಲ್ಲಿ ಹೇಳುವುದಾದರೆ- 'ಸೃಷ್ಟಿ' ಎಂದರೆ ಅಭಿವ್ಯಕ್ತಿ ಎನ್ನುವುದೇ ಹೌದಾದರೂ 'ಅಭಿವ್ಯಕ್ತಿ'ಗೆ ವಿಮುಖವಾದ ಇನ್ನೊಂದು ಎಳೆಯೂ ಈ ಸೃಷ್ಟಿಯಲ್ಲಿ ಅಷ್ಟೇ ಬಲವಾಗಿರುವಂತಿದೆ. ಆದುದರಿಂದಲೇ ಅನುಭವವನ್ನು ಹೇಳಹೊರಡುವಾಗ 'ಮಾತು' ತನ್ನ ಸ್ವರೂಪವನ್ನು ಬದಲಾಯಿಸಿಕೊಳ್ಳುತ್ತದೆ. ಅದು ಇನ್ನೊಬ್ಬರನ್ನು ಉದ್ದೇಶಿಸಿ ಮಾತನಾಡುವ ಧಾಟಿಯನ್ನು ಬಿಟ್ಟುಕೊಟ್ಟು ತನಗೆ ತಾನೇ ಹೇಳಿಕೊಂಡಂತೆ, ಮುಖೋದ್ಗತಕ್ಕೂ ಹೃದ್ಗತಕ್ಕೂ ಅಂತರವಿಲ್ಲದಂತೆ, ಹೇಳಿಯೂ ಹೇಳದಂತೆ, ಹೇಳದೆಯೂ ಹೇಳಿದಂತೆ, ಕಾವ್ಯಗುಣಕ್ಕೆ ಹತ್ತಿರವಾಗಿರುತ್ತದೆ. ಅಥವಾ ಇದೇ ಕಾವ್ಯಗುಣ!

ಮಾತು ತನ್ನನ್ನು ತಾನು ಜೀವಂತ ಮಾಡಿಕೊಳ್ಳುವುದು ಅನುಭವದ ಒಡನಾಡಿಯಾಗಿದ್ದಾಗ. ಅನುಭವದ ಒಡನಾಟದಲ್ಲಿ ಮಾತು ಎಂಥ ಅಪೂರ್ವವಾದ ಸ್ವಾತಂತ್ರ್ಯವನ್ನು ಪಡೆದುಕೊಳ್ಳಬಹುದೆಂದರೆ-ಕೆಲವೊಮ್ಮೆ ಮಾತು ಅನುಭವವನ್ನೇ ಮೀರಿ ಮುನ್ನುಗ್ಗಬಹುದು! ಸ್ವಾಮೀ ವಿವೇಕಾನಂದರು ಹಿಂದೂಗಳು ಪರಮ ಪುರುಷಾರ್ಥ ಎಂದು ನಂಬುವ 'ಮೋಕ್ಷ'ವೇ ತನಗೆ ಬೇಕಿಲ್ಲ ಎನ್ನುತ್ತಿದ್ದರು! ಲೋಕದ ಕಷ್ಟಗಳಿಗೆ ಎದೆಕರಗಿ, ಈ ಕಷ್ಟಗಳನ್ನು ನೀಗಿಸುವಲ್ಲಿ ದುಡಿಯುವುದಕ್ಕಾಗಿ ತಾನು ಎಷ್ಟು ಜನ್ಮಗಳನ್ನೆತ್ತಬೇಕಾಗಿ ಬಂದರೂ ಸರಿಯೇ-ತನಗೆ ಅನಂತ ಜನ್ಮಗಳೇ ಇರಲಿ; ಮೋಕ್ಷವೇ ಬೇಡ ಎನ್ನುತ್ತಿದ್ದರು. ಬಹು ಹಿಂದೆ ಬುದ್ಧನಾಡಿದ ಮಾತಿಗೆ ಸಂವಾದಿಯಾದ ಮಾತಿದು. 'ಜಗತ್ತಿನ ದುಃಖವನ್ನು ತನ್ಮೂಲಕ ನಿವಾರಿಸಬಲ್ಲೆನಾದರೆ ಪ್ರತಿಯೊಬ್ಬರ ಯಾತನೆಯ ಭಾರವನ್ನೂ ಸಂತೋಷದಿಂದ ಹೊರುತ್ತೇನೆ'-ಎಂದಿದ್ದ ಬುದ್ಧ. ಗುಟ್ಟೇನೆಂದರೆ ಮೋಕ್ಷದ ಅನುಭವವನ್ನು ಪಡೆದವನೇ ಮೋಕ್ಷಬೇಕಿಲ್ಲ ಎನ್ನಲೂಬಲ್ಲ! ಮಾತು, ಅನುಭವದ ಸಂಗಾತ ಇದ್ದು ಪಡೆದ ಸ್ವಾತಂತ್ರ್ಯವದು. ಅಥವಾ ಅನುಭವವೇ ಮಾತಿಗೆ ನೀಡಿದ ಸ್ವಾತಂತ್ರ್ಯ. 'ಮೋಕ್ಷ' ಅಥವಾ 'ಬಿಡುಗಡೆ'ಯ ಅನುಭವವು ತನ್ನನ್ನು ತಾನೇ ಅರಿಯುವಲ್ಲಿ ಪಡೆದುಕೊಂಡ ಸ್ವಾತಂತ್ರ್ಯವದು. ಇನ್ನೊಬ್ಬರಿಗೆ ಅರ್ಥವಾಗಿಯೇ ತಾನು ಕೃತಾರ್ಥವಾಗಬೇಕಾದ ಹಂಗು- ಇಂಥ ಮಾತುಗಳಿಗೆ ಇಲ್ಲವೆನಿಸುತ್ತದೆ. ಅನುಭವಕ್ಕೆ ಅರ್ಥದ ಹಂಗೇ ಇಲ್ಲವೆನೋ. ಆದರೆ ಇಂಥ ಮಾತೇಬೇಕಾದವರು ಇದ್ದೇ ಇರುತ್ತಾರೆ ಎನ್ನುವುದು ಅನುಭಾವಿಗಳ ವಿಶ್ವಾಸ. ಅನುಭಾವಿಗಳ ಪ್ರಕಾರ ಇಂಥ ಇಬ್ಬರು ಸೇರಿದರೆ ಆಗ ನಿಜವಾದ ಏಕಾಂತ! ಏಕಾಂತದ ಅನುಭವ! ಅದು ಇಬ್ಬರು ಸೇರಿಯೂ ಭಂಗಗೊಳ್ಳದ ಏಕಾಂತ!

ಇಪ್ಪತ್ತನೆಯ ಶತಮಾನದ ಬಹು ದೊಡ್ಡ ದಾರ್ಶನಿಕರೆಂದು ಹೆಸರಾದ ಜೆ.ಕೃಷ್ಣಮೂರ್ತಿಯವರ ಮಾತುಗಳಲ್ಲಿಯೂ ಈ ರೀತಿಯ ಹಂಬಲವೊಂದು-ಒಳ ಶ್ರುತಿಯಂತೆ- ಕೇಳಿಬರುತ್ತಿತ್ತು. ಜೆ.ಕೆ. ಬೇರೆ ಬೇರೆ ರೀತಿಗಳಲ್ಲಿ ಇದನ್ನು ವ್ಯಕ್ತಪಡಿಸುತ್ತಿದ್ದರು. ಅವರಲ್ಲಿ ಪದಗಳ ಮೂಲಾರ್ಥದ ಕಡೆಗೆ ಒಂದು ಕುತೂಹಲ ಯಾವಾಗಲೂ ಇರುತ್ತಿತ್ತು. ಮಕ್ಕಳು ಭಾಷೆಯನ್ನು ಅಂತರ್ಗತ ಮಾಡಿಕೊಳ್ಳುವಲ್ಲಿನ ಒರಿಜಿನಾಲಿಟಿಯಂತೆ.

ಉದಾಹರಣೆಗೆ: **Deliberation** ಎಂಬ ಒಂದು ಪದ; ಯೋಚಿಸಿ ತೊಡಗುವುದು ಎಂದು ಇದರರ್ಥ. ಈ ಪದ ಬಂದುದು **LIBRA** ಎಂಬ ಗ್ರೀಕ್ ಮೂಲದಿಂದ. **LIBRA** ಎಂದಾಗ , ತೂಗಿ ನೋಡುವುದು, ಸಮತೋಲನ ಎಂದರ್ಥ. ರಾಶಿ ಚಕ್ರದಲ್ಲಿಯೂ **libra** ಎಂದರೆ ತುಲಾರಾಶಿ. ತುಲಾ ಎಂದರೆ ತಕ್ಕಡಿ. ತೂಗಿನೋಡುವುದಕ್ಕೆ ಇಬ್ಬರು ಸಮಾನ ಮನಸ್ಕರು ಬೇಕು ಎನ್ನುವುದು ಇಲ್ಲಿನ ಧ್ವನಿ! **Libra** ಪದದಿಂದಲೇ **liberate, liberation-** ಪದಗಳು ಉಂಟಾದವು. **liberation** ಎಂದರೆ ಬಿಡುಗಡೆ. ಈ ಮೂಲದಿಂದಲೇ ಬಂದ ಮತ್ತೊಂದು ಪದ **deliverare.**

ಪರಸ್ಪರ ಸಲಹೆಗಾರರಂತಿರುವ ಇಬ್ಬರು ಗೆಳೆಯರು ತಮ್ಮ ಮನಸ್ಸುಗಳನ್ನು ತೋಡಿಕೊಳ್ಳುತ್ತಾ ಆಳವಾದ ಮಥನದಲ್ಲಿ ತೊಡಗಿರೋದು ಈ **deliverare** ಪದದ ಅರ್ಥ. ಒಬ್ಬ ಹೇಳೋದು, ಇನ್ನೊಬ್ಬ ಕೇಳೋದು ಅಲ್ಲ. ಇಬ್ಬರೂ ಸಕ್ರಿಯರು. ಇಬ್ಬರೂ ಕುಶಲರು. ಇಬ್ಬರೂ ನಿಃಸ್ಪೃಹರು. ಇಂಥ ಇಬ್ಬರು ಒಂದು ಸಮಸ್ಯೆಯನ್ನು ಸಮಾನ ಕುತೂಹಲದಿಂದ ಚರ್ಚಿಸುತ್ತಿದ್ದಾರೆ- ಇದು ಜೆ.ಕೆ.ಯವರ ಇಂಗಿತ. ಬರಿಯ ಹೇಳುಗ-ಕೇಳುಗ ಸಂಬಂಧವಲ್ಲ. ಇಂಥ ಜೀವಂತ ಸಂಬಂಧಕ್ಕಾಗಿ, ಸಂಬಂಧದ ಜೀವಂತಿಕೆಗಾಗಿ ಜೆ.ಕೆ.ಯವರ ಹಂಬಲ.

ನಿಜಕ್ಕಾದರೆ, 'ಪ್ರಜ್ಞೆ' ಎನ್ನುವ ಅರ್ಥವನ್ನು ಸೂಚಿಸುವ **consciousness** ಎಂಬ ಪದದ ಅರ್ಥ-ಜತೆಯಾಗಿ ಪಡೆದ ತಿಳಿವಳಿಕೆ – **knowing together** ಎಂದೇ.

ಉಪನಿಷತ್ತಿನ ಬಹ್ವಂಶ ಶಾಂತಿಪಾಠಗಳು ದ್ವಿ-ವಚನದಲ್ಲಿರೋದು ಇದೇ ಕಾರಣಕ್ಕೆ.

ನಮ್ಮಲ್ಲಿ ಕವಿ-ಸಹೃದಯತತ್ವ ಬಂದಿರುವುದು ಇದೇ ನೆಲೆಯಲ್ಲಿ ಜೆ.ಕೆ. ಇದನ್ನು ಪರಸ್ಪರ ಗುರುತಿಸುವ ವಿದ್ಯಮಾನ ಎನ್ನುತ್ತಾರೆ. ಇರಲಿ.

ನಾವು ಗಮನಿಸಬೇಕಾದದ್ದು ಇದು- ಜೆ.ಕೆ. ಯಾರನ್ನೂ ಯಾವುದನ್ನೂ ಉಲ್ಲೇಖ, ಕೋಟ್- ಮಾಡೋದಿಲ್ಲ. ಉಲ್ಲೇಖ ಮಾಡಿ ಮಾತನ್ನು ರಂಜನೀಯ ಮಾಡೋದಿಲ್ಲ. ಮಾತನ್ನು ಪುರಾಣ ಮಾಡೋದಿಲ್ಲ. ಅದರ ಬದಲಾಗಿ ಪದಗಳ ಹಿಂದಿನ ಅನುಭವದತ್ತ, ಯಾವ ಹಿನ್ನೆಲೆಯಲ್ಲಿ ಈ ಪದಗಳು ಮೂಡಿಬಂದವು ಎಂಬ ಹಿನ್ನೆಲೆಯತ್ತ ಮನಸ್ಸನ್ನು ಹಾಯಿಸುತ್ತಾರೆ. ಮಾತನ್ನೇ ಅಂತರ್ಮುಖಿಗೊಳಿಸುತ್ತಾರೆ. ಮಾತು ಅನುಭವದಲ್ಲಿ ಮತ್ತೆ ಬೆರೆಯುವಂತೆ ಮಾಡುತ್ತಾರೆ. 'ಉಲ್ಲೇಖ'ದ ಮಾತುಗಾರಿಕೆಗಿಂತ ಇದು ಗುಣಾತ್ಮಕವಾಗಿ ಬೇರೆಯಾದ್ದು.

■ ತೋಷ

## ಮಾತೇ ಮುತ್ತು

★ ನಮ್ಮ ಎಲ್ಲ ಕನಸುಗಳೂ ನಿಜವಾಗುತ್ತವೆ; ಆದರೆ ಅವುಗಳನ್ನು ಬೆನ್ನಟ್ಟುವ ಕಸುವು ಇರಬೇಕು.

—ವಾಲ್ಟ್ ಡಿಸ್ನಿ

★ ಪುರುಷನ ಮುಖ ಆತನ ಆತ್ಮಚರಿತ್ರೆ. ಹೆಣ್ಣಿನ ಮುಖ ಆಕೆಯ ಕಾದಂಬರಿ.

—ಆಸ್ಕರ್ ವೈಲ್ಡ್

★ ಹೆಂಡತಿ ಬಯಸುವುದಕ್ಕಿಂತ ಹೆಚ್ಚು ಹಣ ಗಳಿಸುವವನೇ ಯಶಸ್ವಿ ಪುರುಷ. ಅಂತಹ ಗಂಡನನ್ನು ಹುಡುಕಿಕೊಳ್ಳುವವಳೇ ಯಶಸ್ವಿ ಹೆಣ್ಣು.

ಲಾನಾ ಟರ್ನರ್

★ ನಿಮ್ಮ ಸಾಮರ್ಥ್ಯ ನಿಮ್ಮನ್ನು ಯಶಸ್ಸಿನ ತುತ್ತತುದಿಗೆ ಒಯ್ಯಬಹುದು. ಆದರೆ ಅಲ್ಲಿ ಉಳಿದುಕೊಳ್ಳಲು ಒಳ್ಳೆಯ ನಡತೆ ಇರಬೇಕು.

—ಜಾನ್ ವುಡನ್

★ ನಾನು ಯಾವತ್ತೂ ಸೋತಿಲ್ಲ. ಒಂದೋ ಗೆದ್ದಿದ್ದೇನೆ, ಇಲ್ಲವೇ ಕಲಿತಿದ್ದೇನೆ.

—ನೆಲ್ಸನ್ ಮಂಡೇಲ